ಚುನಾಯಿತರಾದ ಈ ಕೆಳಕಂಡ ಸದಸ್ಯರು ಭಗವಂತನ ಹೆಸರಿನ ಮೇಲೆ

1. ಸದಸ್ಯರಿಂದ ಪ್ರಮಾಣವಚನ ಮತ್ತು ಪ್ರತಿಜ್ಞಾವಚನ ಸ್ವೀಕಾರ.

ಸತ್ಯ ನಿಷ್ಠೆಯ ಹೆಸರಿನ ಮೇಲೆ ಪ್ರಮಾಣ ವಚನ ಸ್ವೀಕರಿಸಿದರು.

ಸದಸ್ಯರ ಹೆಸರು	ಕ್ಷೇತ್ರ	ಪ್ರಮಾಣ ವಚನ ಸ್ವೀಕರಿಸಿದ ಭಾಷೆ
ಶ್ರೀ ಫೈರೋಜ್ ನೂರುದ್ದೀನ್ ಸೇಠ್	ಬೆಳಗಾವಿ ಉತ್ತರ	ಇಂಗ್ಲೀಷ್
ಶ್ರೀ ಹೆಚ್.ಎಸ್.ಪ್ರಕಾಶ್	ಹಾಸನ	ಕನ್ನಡ
ಶ್ರೀ ಬಿ.ಶ್ರೀರಾಮುಲು	ಬಳ್ಳಾರಿ (ಗ್ರಾ)	ಕನ್ನಡ
ಶ್ರೀ ಟಿ.ಹೆಚ್.ಸುರೇಶ್ ಬಾಬು	ಕಂಪ್ಲಿ	ಕನ್ನಡ
ಶ್ರೀ ಜಮೀರ್ ಅಹಮದ್ ಖಾನ್ ಬಿ.ಜೆಡ್	ಚಾಮರಾಜಪೇಟೆ	ಇಂಗ್ಲೀಷ್

2. ಸಭಾಧ್ಯಕ್ಷರ ಚುನಾವಣೆ

ಅಧ್ಯಕ್ಷರ ಚುನಾವಣೆ

ಹಂಗಾಮಿ ಅಧ್ಯಕ್ಷರು: ಶ್ರೀ ಕಾಗೋಡು ತಿಮ್ಮಪ್ಪ ಅವರನ್ನು ವಿಧಾನಸಭೆಯ ಸಭಾಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರು ಸೂಚಿಸುವುದು.

ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ,

ಶ್ರೀ ಕಾಗೋಡು ತಿಮ್ಮಪ್ಪ ಅವರನ್ನು ವಿಧಾನಸಭೆಯ ಸಭಾಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಹಂಗಾಮಿ ಅಧ್ಯಕ್ಷರು : ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರಾದ ಶ್ರೀ ಆರ್.ವಿ.ದೇಶಪಾಂಡೆ ಅವರು ಮಾನ್ಯ ಮುಖ್ಯಮಂತ್ರಿಗಳು ಸೂಚಿಸಿರುವ ಪ್ರಸ್ತಾವವನ್ನು ಅನುಮೋದಿಸುವುದು.

ಶ್ರೀ ಆರ್.ವಿ.ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು) : ಮಾನ್ಯ ಅಧ್ಯಕ್ಷರೆ, ಶ್ರೀ ಕಾಗೋಡು ತಿಮ್ಮಪ್ಪ ಅವರನ್ನು ವಿಧಾನಸಭೆಯ ಸಭಾಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ಸನ್ಮಾನ್ಯ ಮುಖ್ಯ–ಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರು ಸೂಚಿಸಿರುವ ಪ್ರಸ್ತಾವವನ್ನು ಅನುಮೋದಿಸುತ್ತೇನೆ.